ಶ್ರೀ ಎಸ್. ಎ. ರಾಮೇಗೌಡ.—ರೈತರಿಗೆ ಟ್ರ್ಯಾಕ್ಟರುಗಳನ್ನು ಸುಲಭ ಬೆಲೆಗೆ ಕೊಡುವಾಗ ಸ್ವೀರು ಪಾರ್ಟುಗಳು ಸಲೀಸಾಗಿ ಸಿಗುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇಂತಹ ಅಕ್ಷೇಪಣೆಗಳು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಈಚೆಗೆ ಮಾನ್ಯ ಕೈಗಾರಿಕೆ ಮಂತ್ರಿಗಳು ಜಪಾನಿಗೆ ಹೋಗಿದ್ದಾಗ ಇಂತಹ ಟ್ರ್ಯಾಕ್ಟರನ್ನು ಪರಿಶೀಲಿಸಿ ತರಲು ಸಾಧ್ಯ ಇದೆ ಇದನ್ನು ತರಿಸಲು ಏರ್ಪಾಡು ಮಾಡುತ್ತೇವೆ ಎಂದು ಹೇಳಿದುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ.

ಶ್ರೀ ಐ. ನಾರಾಯಣ ಗೌಡ.—ಹೆಚ್ಚಿನ ಆಹಾರ ಬೆಳೆಯುವುದಕ್ಕಾಗಿ ಪಂಪುಸೆಟ್ಟುಗಳನ್ನು ಯಾವ ರೀತಿಯಾಗಿ ಕೊಡುತ್ತಿದ್ದೀರೋ ಅದರಂತೆ ಟ್ರ್ಯಾಕ್ಟರುಗಳನ್ನು ಸರಕಾರ ಖರೀದಿ ಮಾಡಿ ರೈತರಿಗೆ ಕೊಡುವ ಯೋಚನೆ ಮಾಡುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ಇದರೊಳಗೆ ದೊಡ್ಡ ಟ್ರ್ಯಾಕ್ಟರುಗಳನ್ನು ಕೊಂಡುಕೊಳ್ಳುವ ರೈತರು ಸ್ವಲ್ಪ ದುಡ್ಡಿರುವವರು ಮತ್ತು ಹೆಚ್ಚು ಜಮೀನಿರುವವರು, ಈಗ ಪ್ರಶ್ನೆ ಇರುವುದು ಚಿಕ್ಕ ಟ್ರ್ಯಾಕ್ಟರುಗಳ ವಿಷಯ. ಇದನ್ನು ಇನ್ನೂ ಇಲ್ಲಿ ತಯಾರು ಮಾಡುತ್ತಿಲ್ಲ. ಮುಂದೆ ತಯಾರಾದ ಮೇಲೆ ಇದನ್ನು ಸಾಲದ ರೂಪವಾಗಿ ಕೊಡುವಾಗ ಈ ನಲಹೆಯನ್ನು ಯೋಚನೆ ಮಾಡಲು ಸರ್ಕಾರದ ಮುಂದೆ ಇಟ್ಟುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ಸಣ್ಣ ಟ್ರ್ಯಾಕ್ಟರುಗಳ ಬೆಲೆ ಏನಾಗಬಹುದು ?

ಶ್ರೀ ಎಚ್. ಸಿ. ಬೋರಯ್ಯ.—ತಯಾರು ಮಾಡಲು ಉದ್ದೇಶಿಸಿರುವ ಸಣ್ಣ ಟ್ರ್ಯಾಕ್ಟರಿನ ಬೆಲೆ ಸುಮಾರು 4,000ದಷ್ಟಾಗುತ್ತದೆ.

ಶ್ರೀ ಎಂ. ಆರ್. ಪಾಟೀಲ್.—ಎಷ್ಟು ಹಾರ್ಸ್ ಪವರಿನದು ?

ಶ್ರೀ ಎಚ್. ಸಿ. ಬೋರಯ್ಯ.—ಆರು ಹಾರ್ಸ್ ಪವರಿನದು.

ಶ್ರೀ ಎಂ. ಆರ್. ಪಾಟೀಲ್.—ಆರು ಹಾರ್ಸ್ ಪವರು ಟ್ರ್ಯಾಕ್ಟರುಗಳು ನಮ್ಮ ದೇಶದ ರೈತರಿಗೆ ಅನುಕೂಲವಾಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಇವನ್ನೆಲ್ಲಾ ಚೆಸ್ಸು ಮಾಡಿದ ಮೇಲೆ ಇದನ್ನು ಕಮರ್ಷಿಯಲ್ ಲೈನಿನ ಮೇಲೆ ಹಾಕುವ ಯೋಚನೆ ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ದೊಡ್ಡ ಟ್ರ್ಯಾಕ್ಟರುಗಳನ್ನು ಮಾಡುವುದರಿಂದ ವ್ಯವಸಾಯಗಾರರಿಗೆ ಹೆಚ್ಚು ಖರ್ಚಾಗುತ್ತದೆ ಎನ್ನುವುದನ್ನು ಸರಕಾರ ಗಮನದಲ್ಲಿಟ್ಟುಕೊಂಡು ಸಣ್ಣ ಟ್ರ್ಯಾಕ್ಟರುಗಳನ್ನು ಆದಷ್ಟು ಬೇಗ ಒದಗಿಸತಕ್ಕ ನೀತಿಯನ್ನು ನಿರ್ದಿಷ್ಟವಾಗಿ ಏನಾದರೂ ಇಟ್ಟುಕೊಂಡಿದ್ದಾರೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಮಾನ್ಯ ಸದಸ್ಯರು ಹೇಳಿದ್ದು ನಿಜ. ಅದರೆ ಚಿಕ್ಕ ಟ್ರ್ಯಾಕ್ಟರುಗಳನ್ನು ಹೊರಗಡೆಯಿಂದ ತರಿಸಿದರೆ ಅದರ ಖರೀದಿ ಏನಾಗುತ್ತದೆ ಮತ್ತು ಇಲ್ಲೇ ಮಾಡಿದರೆ ಏನಾಗುತ್ತದೆ ಎನ್ನುವುದನ್ನೆಲ್ಲಾ ನೋಡಿ ಈ ವಿಷಯವನ್ನು ಆಲೋಚನೆ ಮಾಡಬೇಕಾಗಿದೆ.

Levy of Penal Interest on the Arrears of loan given to Agriculturists for Purchase of Tractors.

*Q.—865. Sri S. V. RAME GOWDA (Malur).—

Will the Government be pleased to state :—

(*a*) whether it is a fact that penal interest is being levied by them on the arrears of loan given to the agriculturists for purchase of tractors ;

(*b*) if so, whether they intend to cancel the present system of levying penal interest and issue orders to levy only simple interest on the arrears ?

A.—Sri H. C. BORAIAH (Parliamentary Secretary to Minister for Agriculture).—

(*a*) Yes.
(*b*) No.

ಶ್ರೀ ಎಸ್. ವಿ. ರಾಮೇಗೌಡ.—ಪೀನಲ್ಲು ಇಂಟರೆಸ್ಟ್ ಎಂದು ಸರಕಾರ ತೆಗೆದುಕೊಳ್ಳುತ್ತಿರುವುದನ್ನು ತೆಗೆದು ರೈತರಿಂದ ಸಾಮಾನ್ಯವಾದ ಬಡ್ಡಿಯನ್ನು ಮಾತ್ರ ವಸೂಲು ಮಾಡಲು ಏರ್ಪಾಡು ಮಾಡುತ್ತೀರಾ ?

†ಶ್ರೀ ಎಚ್. ಸಿ. ಬೋರಯ್ಯ.—ಆ ಬಗ್ಗೆ ಈಗಾಗಲೇ ಹಾಕಿದ ಪ್ರಶ್ನೆಗಳಿಂದ ತೆಗೆದುಕೊಳ್ಳುತ್ತಿದ್ದಾರೆ. ಅನೇಕರಿಂದ ಈ ಬಗ್ಗೆ ಮನವಿಗಳೂ ಬಂದಿವೆ. ಅದು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಮೇಗೌಡ.—ಪೀನಲ್ಲು ಇಂಟರೆಸ್ಟ್ ಎಂದು ಎಷ್ಟು ಪರ್ಸೆಂಟು ಹಾಕುತ್ತಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ಹತ್ತು ಪರ್ಸೆಂಟು ಎಂದು ಹಾಕಲಾಗಿದೆ.

Sri V. MASIYAPPA.—What is the total amount of penal interest due to Government and in how many cases ?

ಶ್ರೀ ಎಚ್. ಸಿ. ಬೋರಯ್ಯ.—ವಿವರಗಳು ನಮ್ಮಲ್ಲಿ ಇಲ್ಲ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಟ್ರಾಕ್ಟರುಗಳನ್ನು ಬಳಸಿಕೊಳ್ಳುವುದರಲ್ಲಿ ಡಿಫಂಕ್ಟ್ ಆದವು ಎಷ್ಟು ?

ಶ್ರೀ ಎಚ್. ಸಿ. ಬೋರಯ್ಯ.—ವಿವರಗಳು ಇಲ್ಲ.

ಶ್ರೀ ಜಿ. ರಾಮೇಗೌಡ.—ಸಾಲವಾಗಿ ಕೊಟ್ಟ ಹಣಕ್ಕೆ ತೆಗೆದುಕೊಳ್ಳುವ ಬಡ್ಡಿ ಜಾಸ್ತಿಯಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—5 ಪರ್ಸೆಂಟು ಬಡ್ಡಿಯಾಗಿ ಹಾಕಿದೆ. ಪೀನಲ್ಲು ಇಂಟರೆಸ್ಟ್ 10 ಪರ್ಸೆಂಟು ಎಂದು ಹಾಕಲಾಗಿದೆ.

Sri K. S. SURYANARAYANA RAO.—Sir, what is the amount of arrears that due to Government on this account ?

ಶ್ರೀ ಎಚ್. ಸಿ. ಬೋರಯ್ಯ.—ಖಚಿತವಾದ ಪ್ರಶ್ನೆ ಕೇಳಿದರೆ ವಿವರಗಳನ್ನು ಆಮೇಲೆ ಒದಗಿಸುತ್ತೇನೆ.

Sri V. S. PATIL.—May I know when the penal interest is charged and under what circumstances and conditions ?

ಶ್ರೀ ಎಚ್. ಸಿ. ಬೋರಯ್ಯ.—ಕಂತುಗಳು ಸರಿಯಾಗಿ ಬರದೇ ಹೋದರೆ ಒಂದು ತಿಂಗಳಲ್ಲಿ ಕೊಡಬೇಕೆಂದು ಡೆಪ್ಯುಟಿ ಕಮಿಷನರವರು ನೋಟೀಸು ಕೊಡುತ್ತಾರೆ. ಆದರ ಮೇಲೂ ಕೊಡದೇ ಹೋದರೆ ಪೀನಲ್ ಇಂಟರೆಸ್ಟನ್ನು ಕೊಡಬೇಕಾಗುತ್ತದೆ.

Mr. SPEAKER.—It is not necessarily penal interest; it is higher interest on default.

ಶ್ರೀ ಎಸ್. ವಿ. ರಾಮೇಗೌಡ.—ಟ್ರಾಕ್ಟರುಗಳ ವಿಚಾರದಲ್ಲಿ ಬೇರೆ ಪ್ರೈವೇಟು ಏಜನ್ಸಿಗಳವರಿಗೂ ಲೈಸನ್ಸನ್ನು ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಯೋಚನೆ ಮಾಡಲಾಗುತ್ತದೆ.

Sri V. MASIYAPPA.—Has it come to the notice of the Government that some second hand tractors which were in the department were supplied to the raiyats on hire purchase system in the beginning and on account of non-working conditions of these tractors the Government were put to loss and the raiyats have represented to Government to waive this penal interest ?

ಶ್ರೀ ಎಚ್. ಸಿ. ಬೋರಯ್ಯ.—ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಬಹುಶಃ ವಿವರಗಳನ್ನು ಒದಗಿಸಬಹುದು.

ಶ್ರೀ ಕೆ. ವಿ. ಬೈರೇಗೌಡ.—ಪೀನಲ್ಲು ಇಂಟರೆಸ್ಟ್ ಎಂದು ಹಾಕುತ್ತಿರುವುದರಿಂದ ರೈತರಿಗೆ ಬಹು ಕಷ್ಟವಾಗುತ್ತಿರುವುದರಿಂದ ಇದನ್ನು ಮಾಫಿ ಮಾಡಲು ಸರಕಾರದವರು ಯೋಚನೆ ಮಾಡುತ್ತಾರೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಅನೇಕ ಅರ್ಜಿಗಳು ಆ ರೀತಿ ಬಂದಿವೆ ಮತ್ತು ಇನ್ನೂ ಅದು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಗಂಗಾಧರ್ ನಾವೋಪಿ.—ಬಡ್ಡಿ ತೆಗೆದುಕೊಳ್ಳುವಾಗ ಶೇಕಡಾ 9 ಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳಕೂಡದು ಎಂದು ಇರುವಾಗ ಸರಕಾರ ಹತ್ತು ಪರ್ಸೆಂಟು ಪೀನಲ್ ಇಂಟರೆಸ್ಟ್ ಎಂದು ಹಾಕುವುದು ಸರಿಯೇ ?

ಶ್ರೀ ಎಚ್. ಸಿ. ಬೋರಯ್ಯ.—ಷರತ್ತುಗಳ ಪ್ರಕಾರ ರೈತರು ಒಪ್ಪಿಕೊಂಡು ಸಾಲವಾಗಿ ತೆಗೆದುಕೊಂಡಿದ್ದಾರೆ. ಅದು ಸರಿಯಾಗಿ ವಸೂಲಾಗದಿದ್ದರೆ ಮಾತ್ರ ಆಗ ಪೀನಲ್ ಇಂಟರೆಸ್ಟ್ ಎಂದು ಹಾಕುವುದು.

Sri V. S. PATIL.—May I know whether these defaults are due to their inability to pay the amount or they are not paying purposely ?

ಶ್ರೀ ಎಚ್. ಸಿ. ಬೋರಯ್ಯ.—ಏನು ಕಾರಣವಿತ್ತೋ ಅದನ್ನು ಹೇಳುವುದಕ್ಕಾಗುವುದಿಲ್ಲ. ಕಾಲಕ್ಕೆ ಸರಿಯಾಗಿ ಕಂತುಗಳನ್ನು ಮಾತ್ರ ಕೊಡಬೇಕು.

ಶ್ರೀ ಟಿ. ಕೆ. ಕಂಬಳಿ.—ಒಂದು ವರ್ಷಕ್ಕೆ ಟ್ರಾಕ್ಟರು ಎಷ್ಟು ತರಿಸುತ್ತೀರಿ, ತರಿಸಿದ ಮೇಲೆ ಅವುಗಳನ್ನು ರೈತರಿಗೆ ಕೊಡುವುದಕ್ಕಾದರೆ ಯಾವ ಆಧಾರದ ಮೇಲೆ ಕೊಡುತ್ತೀರಿ ?

ಶ್ರೀ ಎಚ್. ಸಿ. ಬೋರಯ್ಯ.—ಬಹುಶಃ ಪ್ರತ್ಯೇಕ ಪ್ರಶ್ನೆಯನ್ನು ಹಾಕಿದರೆ ವಿವರಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ಇದೇ ರೀತಿ ಶೇಕಡ ಹತ್ತರಂತೆ ಬಡ್ಡಿಯನ್ನು ಕೈಗಾರಿಕಾ ಸಾಲಗಳ ಮೇಲೆ ಹಾಕುತ್ತಿದ್ದೀರಾ ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಹೆಬ್ಬಾಳ್ ಅಗ್ರಿಕಲ್ಚರಲ್ ಡಿವಿಜನ್‌ನಲ್ಲಿ ಏನು ಟ್ರಾಕ್ಟರುಗಳು ಮತ್ತು ಅದರ ಬಿಡಿ ಭಾಗಗಳಿವೆ ಅವುಗಳನ್ನು *bona fide* ವ್ಯವಸಾಯಗಾರರಿಗೆ ಟೆಂಡರ್ ರೇಟಿನಲ್ಲಿ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಆ ರೀತಿಯ ಮನವಿಗಳು ಬಂದರೆ ಪರಿಶೀಲಿಸಬಹುದೆಂದು ಕಾಣುತ್ತದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಸುಸ್ತಿ ಬಡ್ಡಿಯನ್ನು ಕೊಡದೆ ಇರುವುದರಿಂದ ಟ್ರಾಕ್ಟರುಗಳನ್ನು seize ಮಾಡಿ ಇಲಾಖೆಯವರ ಸುಪರ್ದಿಗೆ ತೆಗೆದುಕೊಂಡಿರುವುವು ಎಷ್ಟಿವೆ ಎಂದು ಹೇಳುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರಗಳನ್ನು ಒದಗಿಸುವುದಕ್ಕೆ ಪ್ರತ್ಯೇಕವಾದ ಪ್ರಶ್ನೆ ಬೇಕಾಗುತ್ತದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಸುಸ್ತಿ ಬಡ್ಡಿಯನ್ನು waive ಮಾಡಲು ಮನವಿಗಳು ಬಂದಿವೆ, ಅವುಗಳನ್ನು ಪರಿಶೀಲಿಸುತ್ತಿದ್ದೇವೆ ಎಂದು ಹೇಳಿದರು. ಈವರೆಗೆ ಯಾರಿಗೂ waive ಮಾಡಿಲ್ಲ ಎಂದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಎಚ್. ಸಿ. ಬೋರಯ್ಯ.—ಈವರೆಗೆ waive ಮಾಡಿರುವುದನ್ನು ತಿಳಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಜಿ. ರಾಮೇಗೌಡ.—ಸುಸ್ತಿ ಬಡ್ಡಿ ಶೇಕಡ ಹತ್ತರಂತೆ ಇರುವುದನ್ನು ಇನ್ನು ಮುಂದಾದರೂ ಕಡಮೆ ಮಾಡುವುದಕ್ಕೆ ಭರವಸೆ ಕೊಡುತ್ತೀರಾ ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಆ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಕೆ. ಕಂಬಳಿ.—ತಾವು ಟ್ರಾಕ್ಟರ್ ಮಂಜೂರು ಮಾಡಿದ ಮೇಲೆ ಅವುಗಳ ವಿಜನ್ಸಿ ಹೊಂದಿರುವವರು ಬೇಗ ಕೊಡುವುದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಆ ಪ್ರಶ್ನೆ ಇದಕ್ಕೆ ಅನ್ವಯಿಸುವುದಿಲ್ಲ ಎಂದು ಕಾಣುತ್ತದೆ.

ಶ್ರೀ ಎಸ್. ವಿ. ರಾಮೇಗೌಡ.—ಸುಸ್ತಿ ಬಡ್ಡಿ ವಜಾ ಮಾಡುವ ವಿಷಯವನ್ನು ಯೋಚನೆ ಮಾಡಲಾಗುತ್ತಿದೆ ಎಂದು ಹೇಳಿದಿರಿ. ಎಷ್ಟು ದಿವಸದಿಂದ ಯೋಚನೆ ಮಾಡುತ್ತಿದ್ದೀರಿ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಈಗ ಸರಳ ಬಡ್ಡಿ ಕೊಡಬೇಕಾಗಿರುವುದು ಶೇಕಡ ಐದರಂತೆ ಯಾರು ಸಮಯಕ್ಕೆ ಸರಿಯಾಗಿ ಆ ಬಡ್ಡಿಯನ್ನು ಕೊಡುವುದಿಲ್ಲವೋ ಅವರಿಗೆ ಅಲ್ಲಂದಾಚೆಗೆ ಸುಸ್ತಿ ಬಡ್ಡಿಯನ್ನು ಹಾಕಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅಭಾವ ಪರಿಸ್ಥಿತಿ ಬಂದು ನಮಗೆ ವಿನಾಯಿತಿ ಕೊಡಿ ಎಂದು ಕೆಲವರು ಮನವಿ ಮಾಡಿಕೊಂಡಿದ್ದಾರೆ ; ಕೆಲವರು ಉದ್ದೇಶ ಪೂರ್ವಕವಾಗಿ ಎಲ್ಲರಿಗೂ ಅದರೆ ನಮಗೂ ಆಗುತ್ತದೆ ಎಂದು ಮನವಿ ಮಾಡಿದ್ದಾರೆ. ಇಂಥ ಕೇಸುಗಳು ಅನೇಕ ವಿವೆ. ಅವೆಲ್ಲ ಸರ್ಕಾರದ ಪರಿಶೀಲನೆಯಲ್ಲಿವೆ.

ಶ್ರೀ ಎಸ್. ಪಿ. ರಾಮೇಗೌಡ.—ಸುಸ್ತಿ ಬಡ್ಡಿಯನ್ನು ವಜಾ ಮಾಡತಕ್ಕ ವಿಚಾರ ಎಷ್ಟು ದಿನ ದಿಂದ ಸರ್ಕಾರದ ಪರಿಶೀಲನೆಯಲ್ಲಿದೆ ?

ಶ್ರೀ ಜಿ. ನಾರಾಯಣಗೌಡ.—ಮಾನ್ಯ ಸದಸ್ಯರೂ ಟ್ರಾಕ್ಟರು ತೆಗೆದುಕೊಂಡಿದ್ದಾರೆ ಸ್ವಾಮಿ. ಅಗ್ರಿಮೆಂಟನ್ನು ಬರೆದುಕೊಟ್ಟಿರುವುದರಿಂದ ಸುಸ್ತಿ ಬಡ್ಡಿ ಹೇಗೆ ಕೊಡಬೇಕು ಎನ್ನುವುದೆಲ್ಲ ಅದರಲ್ಲ ನಮೂದಾಗಿರುವುದರಿಂದ ಅವ್ರಿಗೆ ಗೊತ್ತಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಸುಸ್ತಿ ಬಡ್ಡಿಯನ್ನು ಎಷ್ಟು ಜನರ ಮೇಲೆ ಹಾಕಿದ್ದೀರಿ, ಎಷ್ಟು ಹಣ ಬರಬೇಕು ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಆ ವಿವರಗಳನ್ನೆಲ್ಲ ಹೇಳುವುದಕ್ಕೆ ಈಗ ಸಾಧ್ಯವಾಗುವುದಿಲ್ಲ ಸ್ವಾಮಿ.

ಶ್ರೀ ವಿ. ಎಂ. ದೇವ್.—ಸುಸ್ತಿ ಬಡ್ಡಿಯನ್ನು ಕಡಮೆ ಮಾಡಬೇಕಾದರೆ ಯಾವ ಯಾವ ಅಂಶ ಗಳ ಮೇಲೆ ಕಡಮೆ ಮಾಡಬಹುದು ಎಂದು ನಿರ್ಣಯಕವಾಗಿದೆ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಅದನ್ನೆಲ್ಲ ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ ಒಂದು ವೇಳೆ ಸರಳ ಬಡ್ಡಿಯನ್ನು ಕೊಟ್ಟದ್ದು, ಅಸಲನ್ನೂ ಕೊಟ್ಟದ್ದು ಸುಸ್ತಿ ಬಡ್ಡಿ ಮಾತ್ರ ಬಾಕಿ ಇದ್ದರೆ ಅಂಥ ಕೇಸುಗಳನ್ನು ಸಹಾನುಭೂತಿಯಿಂದ ಪರಿಶೀಲಿಸಬಹುದು.

ಶ್ರೀ ಇ. ನಾರಾಯಣ ಗೌಡ.—ಅನೇಕ ಮನವಿಗಳು ಸರ್ಕಾರದ ಪರಿಶೀಲನೆಯಲ್ಲಿವೆ ಎಂದು ಹೇಳಿದರು. ಸಣ್ಣ ಸಣ್ಣ ಕೈಗಾರಿಕೆಗಳವರಿಗೆ ಸಬ್ಸಿಡಿ ರೂಪದಲ್ಲಿ ಸಹಾಯ ಮಾಡುತ್ತಿದ್ದಾರೆ. ಅದೇ ರೀತಿ ಟ್ರಾಕ್ಟರುಗಳನ್ನು ಕೊಂಡುಕೊಳ್ಳುವವರಿಗೂ ದೇಶದಲ್ಲಿ ಆಹಾರ ಅಭಿವೃದ್ಧಿ ಚೆನ್ನಾಗಿ ಆಗಬೇಕು ಎನ್ನುವ ದೃಷ್ಟಿಯಿಂದ ಸಬ್ಸಿಡಿ ಕೊಡುವ ವಿಷಯವನ್ನು ಪರಿಶೀಲಿಸುತ್ತೀರಾ ?

ಶ್ರೀ ಜಿ. ನಾರಾಯಣ ಗೌಡ.—ನಮ್ಮ ಮುಂದೆ ಇರುವುದು ಸಣ್ಣ ಟ್ರಾಕ್ಟರುಗಳ ವಿಷಯ. ಮಾನ್ಯ ಸದಸ್ಯರು ಕೇಳುತ್ತ ಇರುವುದು ದೊಡ್ಡ ಟ್ರಾಕ್ಟರುಗಳಿಗೆ ಸಂಬಂಧಪಟ್ಟ ಹಾಗೆ. ದೊಡ್ಡ ಟ್ರಾಕ್ಟರುಗಳನ್ನು ಹೆಚ್ಚು ಜಮೀನಿರುವವರು ಕೊಂಡುಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ಸಬ್ಸಿಡಿ ಕೊಡುವುದನ್ನು ಯೋಚನೆ ಮಾಡಲಾಗುತ್ತದೆಯೇ ಇಲ್ಲವೇ ಎಂದು ಹೇಳುವುದಕ್ಕೆ ಸಾಧ್ಯ ವಿಲ್ಲ.

ಶ್ರೀ ಜಿ. ರಾಮೇಗೌಡ.—ಕೈಗಾರಿಕಾ ಸಾಲಕ್ಕೆ ಇರುವಂಥ ಬಡ್ಡಿಯನ್ನೇ ವ್ಯವಸಾಯದ ಸಾಲಕ್ಕೂ, ಟ್ರಾಕ್ಟರು ಕೊಂಡುಕೊಳ್ಳುವುದಕ್ಕೆ ಮಾಡಿರುವ ಸಾಲಕ್ಕೂ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ ?

ಶ್ರೀ ಜಿ. ನಾರಾಯಣ ಗೌಡ.—ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಬಂದಿದೆ.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Conditions on which the Irrigation Pump-sets are proposed to be provided on Instalment Basis to the Ryots.

*Q.—565. Sri B. BHASKARA SHETTY (Kaup).—

Will the Government be pleased to state :—

(*a*) the condition on which the irrigation pump-sets are proposed to be provided on instalment basis to the ryots in the State to grow more food during this emergency ;

(*b*) whether they would implement the Scheme in South Kanara District also ;

(*c*) the number of applications received for the supply of electric pumpsets in South Kanara District ;